# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ,
ಹೊರಮಾವು ಗ್ರಾಮ, ಬೆಂಗಳೂರು– 560113

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/35/2022–23 ದಿನಾಂಕ: 04.06.2022

*ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/ 2020–21 ದಿನಾಂಕ:21/09/2020 ಹಾಗೂ ನೋಡಲ್ ಅಧಿಕಾರಿ/ಕಂದಾಯ ಅಧಿಕಾರಿ (ಕೆ.ಆರ್.ಪುರ) ರವರು ದಿನಾಂಕ:–04.06.2022 ರಂದು ಹೊರಮಾವು ಉಪ–ವಿಭಾಗದ ರಾಮಮೂರ್ತಿನಗರ ವಾರ್ಡ್–26 ರ ಕಛೇರಿಯಲ್ಲಿ ಮೀಟಿಂಗ್ ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.*

ಉಪಸ್ಥಿತರು:

| ಕ್ರ.ಸಂ | ಹೆಸರು | ಹುದ್ದೆ | ಮೊ.ಸಂ |
|---|---|---|---|
| 1 | ಶ್ರೀ.ಬಸವ ಚಾರಿ | ನೋಡಲ್ ಅಧಿಕಾರಿ ವಾರ್ಡ್ ನಂ–26 | |
| 2 | ಶ್ರೀ.ವಿಕ್ರಮ್ ಸಜ್ಜನ್ ಶೆಟ್ಟಿ | ಸಹಾಯಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿ ವಾರ್ಡ್ ನಂ–26 | 9739838297 |
| 3 | ಶ್ರೀ. ಆನಂದ್ ಸಜ್ಜನ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ, ವಾರ್ಡ್ –26 | 9620101648 |
| 4 | ಶ್ರೀ.ಚಿಟ್ಟಿಬಾಬು, ಸಹಾಯಕರು, | ಅರಣ್ಯ ಬಿ.ಬಿ.ಎಂ.ಪಿ | 9945430665 |
| 5 | ಶ್ರೀ.ವಿಶ್ವನಾಥ್.ಕೆ.ಎಲ್ | ಆರೋಗ್ಯ ನಿರೀಕ್ಷಕರು, ವಾರ್ಡ್ ನಂ.26 | |
| | ಸಾರ್ವಜನಿಕರು | | |
| 6 | ಶ್ರೀ. ಕೊಚ್ಚು ಶಂಕರ್ | ಟ್ರೇನಿಟಿ ಬಡಾವಣೆ | – |
| 7 | ಶ್ರೀ.ಬಸವರಾಜ.ಕೆ | ಮಣ್ಣುಭೂಮಿ | – |
| 8 | ಶ್ರೀ.ಮಂಜು | ಕನಕನಗರ | – |
| 9 | ಲಕ್ಷ್ಮಣ.ಪಿ.ಕೆ | ಮಾರ್ಷಲ್ | – |
| 10 | ಶ್ರೀ. ಸತೀಶ್ | ಬಂಜರಾ ಬಡಾವಣೆ | – |
| 11 | ಶ್ರೀನಂಜಪ್ಪ | ಸರ್.ಎಂ.ವಿನಗರ | |



Scanned with CamScanner

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.26 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲೂಎಸ್ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

**ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-**

**ಶ್ರೀ ಮಂಜು ಕನಕನಗರ ಬಡಾವಣೆ :-** ರವರು ಮಾತನಾಡುತ್ತಾ , ನಾಯಿಗಳು ತುಂಬಾ ಅಗಿದ್ದು ಕೂಡಲೇ ಸಂಭಂಧ ಪಟ್ಟ ಅಧಿಕಾರಿಗಳು ಸರಿಯಾದ ಕ್ರಮವನ್ನು ಜರುಗಿಸಿಕೊಡಬೇಕೆಂದು ಕೋರಿರುತ್ತಾರೆ.

ಕ್ರಮ:- ಹಿರಿಯ ಆರೋಗ್ಯ ಪರಿವೀಕ್ಷಕರು, ಅಗತ್ಯ ಕ್ರಮವಹಿಸುವಂತೆ ಸೂಚಿಸಿತು.

2) ಕನಕನಗರ 8ನೇ ಅಡ್ಡ ರಸ್ತೆಯಲ್ಲಿ ಹೊಸದಾಗಿ ಆರ್.ಸಿ.ಸಿ ಚರಂಡಿ ಮಾಡಿದ್ದು, ಮೇಲ್ಭಾಗದಲ್ಲಿ ಸ್ಲಾಬ್‌ಗಳನ್ನು ಅಳವಡಿಸಿಕೊಡಬೇಕೆಂದು ತಿಳಿಸಿದರು

ಕ್ರಮ:- ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಶ್ರೀ. ಕೊಚ್ಚು ಶಂಕರ್ ಟ್ರೀನಿಟಿ ಬಡಾವಣೆ :-** ರವರು ಮಾತನಾಡಿ, ರಸ್ತೆಗಳಲ್ಲಿ ನೀರಿನ ಪೈಪ್ ಲೇನ್ ಅಳವಡಿಸಿದ್ದು ಕೂಡಲೇ ರಸ್ತೆಗಳನ್ನು ಡಾಂಬರೀಕರಣ ಮಾಡಿಕೊಡುವುದಾಗಿ ತಿಳಿಸಿದರು.

ಕ್ರಮ:- ಇದಕ್ಕೆ ಪ್ರತಿಕ್ರಿಯಿಸದ ನೊಡೆಲ್ ಅದಿಕಾರಿ ರವರು ವೋಟರ್ ಐ.ಡಿಗಳು ಅಪ್‌ಲೋಡ್ ಮಾಡಿ ಎರಡು ವಾರಗಳ ನಂತರ ಬರುವುದು ಎಂದು ವಿವರಿಸಿದರು.

2) ಬಡಾವಣೆಯಲ್ಲಿ ಯು.ಜಿ.ಡಿ, ಕಾವೇರಿ ಪೈಪ್ ಲೈನ್, ಹಾಗೂ ಗೇಲ್ ಗ್ಯಾಸ ಅಗೆದು 2.00 ಕೀಮೀ ಬೋರವೆಲ್ ಪೈಪ್ ಲೈನ್‌ಗಳನ್ನು ಹಾಳು ಮಾಡಿದ್ದು, ಕೂಡಲೇ ಹೊಸ ಪೈಪ್ ಲೈನ್‌ಗಳನ್ನು ಅಳವಡಿಸಬೇಕೆಂದು ತಿಳಿಸಿದರು.

ಕ್ರಮ:- ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಸತೀಶ್ ಚಂದ್ರ ಬಂಜಾರ್ ಬಡಾವಣೆ :-** ರವರು ಮಾತನಾಡಿ, 8ನೇ ಅಡ್ಡ ರಸ್ತೆಯಲ್ಲಿ ವಿಪರೀತ ಮಳೆ ಬಂದು ಲೇಕ್ ರಸ್ತೆಯಲ್ಲಿ ತುಂಬಾ ಕಸ ತುಂಬಿದ್ದು ಕೂಡಲೇ ಕಸವನ್ನು ತೆಗೆಸಿಕೊಡುವುದಾಗಿ ತಿಳಿಸಿದರು.

ಕ್ರಮ:- ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

2) ಬಂಜಾರ ಬಡಾವಣೆಯಲ್ಲಿ ಗಿಡ, ಕಸಗಳು ಬೆಳೆದಿದ್ದು ಕೂಡಲೇ ಸ್ವಚ್ಚಗೊಳಿಸಕೊಡುವುದಾಗಿ ತಿಳಿಸಿದರು.

ಕ್ರಮ:- ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

3) ಕಲ್ಕೆರೆ ಕೆರೆಯು ತುಂಬಿ ನೀರು ಬಡಾವಣೆಗೆ ಬರುತ್ತಿದ್ದು, ಕೂಡಲೇ ಅಗತ್ಯ ಕ್ರಮವಹಿಸುವುದಾಗಿ ತಿಳಿಸಿದರು.

**ಶ್ರೀ. ನಂಜಪ್ಪ ಸರ್.ಎಂ.ವಿ ನಗರ ಬಡಾವಣೆ:-** ರವರು ಮಾತನಾಡಿ 8ನೇ ಮುಖ್ಯ ರಸ್ತೆಯಲ್ಲಿ ಗುಂಡಿಗಳು ಹಾಗಿದ್ದು ಕೂಡಲೇ ವೆಟ್‌ಮಿಕ್ಸ ಹಾಕಿ ರಸ್ತೆಯನ್ನು ಸರಿಪಡಿಸಬೇಕೆಂದು ತಿಳಿಸಿದರು

ಕ್ರಮ:- ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಶ್ರೀ. ಎಮ್.ಆರ್.ರಿಚ್ಚಸ್ ಬಡಾವಣೆ:-** ರವರು ಮಾತನಾಡಿ ರಸ್ತೆಯು ತುಂಬಾ ಹಾಳಾಗಿದ್ದು ಮಳೆ ಬಂದಾಗ ಒಡಾಡಲು ತುಂಬಾ ಕಷ್ಟಕರವಾಗಿದ್ದು ಕೂಡಲೇ ರಸ್ತೆಯನ್ನು ಡಾಂಬರೀಕರಣ ಮಾಡುವುದಾಗಿ ತಿಳಿಸಿದರು.

ಕ್ರಮ:- ಸಹಾಯಕ ಅಭಿಯಂತರರು, ಯು.ಜಿ.ಡಿ, ಕಾವೇರಿ ಪೈಪ್ ಲೈನ್‌ಗಳನ್ನು ಇತ್ತಿಚಿಗಷ್ಟೆ ಅಳವಡಿಸಿದ್ದು ರಸ್ತೆಯನ್ನು ಮೋಟರಬೆಲ್ ಮಾಡುವುದಾಗಿ ಸಭೆಯು ಸೂಚಿಸಿತು.

ವಾರ್ಡ್ ಮೀಟಿಂಗ್ ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಾ.ಅ ಹೊರಮಾವು ಉಪ-ವಿಭಾಗ ರವರು ಗೂಗಲ್ ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ದಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

Scanned with CamScanner

ನೋಡಲ್ ಅಧಿಕಾರಿ ವಾರ್ಡ್ ನಂ.26
ಹಾಗೂ ಕಂದಾಯ ಅಧಿಕಾರಿ
ಕೆ.ಆರ್.ಪುರ ವಿಬಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರು
ಹೊರಮಾವು ವಾರ್ಡ್‌ನಂ.26
ಬಿ.ಬಿ.ಎಂ.ಪಿ

Scanned with CamScanner